ಹಿಂದಿನ ಸಲ ಬಂದಾಗ್ಲೂ ಹೇಳಿದ್ದೆ. ನೋಡು! ನಾನು ಬದುಕಿರೋವರೆಗೆ ಈ ಮನೇನ ಮಾರೋದಿಲ್ಲ; ತಿಳ್ಕೋ!' ಎನ್ನುತ್ತ ಎದ್ದು ಹೋದರು.

ಮಾರನೆಯ ದಿನ ಬೆಳಿಗ್ಗೆ ಅಪ್ಪಮಗ ಇಬ್ಬರೂ ಮೌನವಾಗಿ ಕಾಫಿ ಕುಡಿದರು. ನಿನ್ನೆ ರಾತ್ರಿಯ ಬಿಸಿ ಇನ್ನೂ ಇಳಿದಿರಲಿಲ್ಲ. ಈ ನಡುವೆ ಶ್ರೀನಿವಾಸ್ ರಾವ್ ಬಂದರು. ಅಡುಗೆಯವ ಅವರಿಗೂ ಕಾಫಿ ತಂದುಕೊಟ್ಟ. 'ನೀನು ಬರ್ತೀಯ ಅಂತ ಕಳೆದ ಹದಿನೈದು ದಿವಸದಿಂದ ನಿಮ್ಮಪ್ಪ ಜೋರಾಗಿ ತಯಾರಿ ನಡೆಸಿದಾರೆ, ಕಣಯ್ಯ! ಯಾವಾಗ ಬಂದೆ, ಸತೀಶ್! ಹೇಗಿದ್ದೀಯ? ಸೊಸೆ, ಮೊಮ್ಮಕ್ಕಳು ಬರ್ತಿದಾರೆ ಅಂತಿದ್ರು ನಿಮ್ಮಪ್ಪ. ಅವರೆಲ್ಲಿ?' ಇತ್ಯಾದಿ ಪ್ರಶ್ನೆಗಳನ್ನೊಡ್ಡಿ ಉತ್ತರ ಪಡೆದರು. 'ಅವ್ರಿಗೆ ಇಲ್ಲಿನ ಇರುವೆ, ಜಿರಲೆ ಕಂಡರೆ ಆಗೋದಿಲ್ಲ, ಅಂಕಲ್! ಹಾಗಂತ ಇಂಡಿಯಾಕ್ಕೆ ಬಂದಿಲ್ಲ ಅಂತಲ್ಲ. ಅಲಕಾ ಮಕ್ಕಳನ್ನು ಕರ್ಕೊಂಡು ಊರಿಗೆ ಹೋಗಿದಾಳೆ. ತಿರುಗಿ ಹೋಗುವಾಗ ಇಲ್ಲಿ ಬರ್ತಾಳೆ.' ಅಂದ ಈತ. 'ಆಯ್ತುಪ್ಪ! ನೀವೆಲ್ಲ ಅಷ್ಟೆ. ವಿದೇಶಕ್ಕೆ ಹೋದಮೇಲೆ ತಿರುಗಿ ಬರೋದುಂಟೇ?' ಅಂತ ನಕ್ಕರು ರಾವ್. ಮಾತಿನ ನಡುವೆ ಸತೀಶ ತಾನು ಬಂದ ಉದ್ದೇಶದ ಬಗ್ಗೆ ವಿವರ ಹೇಳಿಕೊಂಡ. 'ಪರವಾಗಿಲ್ಲ, ಕಣಯ್ಯ! ಸ್ವಂತ ಉದ್ಯೋಗ ಮಾಡೋದಕ್ಕೆ ಧೈರ್ಯ ಬೇಕು—ಅದೂ ವಿದೇಶದಲ್ಲಿ. ಗುಡ್ ಲಕ್!' ಅಂದ್ರು ರಾವ್. ಸತೀಶ ತನ್ನಪ್ಪನ ನಿಲುಮೆಯ ಕುರಿತು ತನ್ನ ಆಕ್ಷೇಪವನ್ನೂ ಹೊರಹಾಕಿದ. 'ನೀವಾದ್ರೂ ಅಪ್ಪನಿಗೆ ಕನ್ವಿನ್ಸ್ ಮಾಡಿ, ಅಂಕಲ್!' ಎಂದು ಗೋಗರೆದ. ಶ್ರೀಕಂಠಯ್ಯ ಮಗನನ್ನು ದುರುಗುಟ್ಟಿ ನೋಡಿದರು. 'ನಾನು ಈ ಮಾತನ್ನ ಹೇಳಿ ತಿಂಗಳಾಯ್ತುಯ್ಯ! ನಿಮ್ಮಪ್ಪನಿಗೆ ಅರ್ಥಾನೇ ಆಗ್ತಿಲ್ಲ. ಈ ಜಾಗಕ್ಕೆ ಸದ್ಯ ರೇಟೆಷ್ಟು ಗೊತ್ತಾ? ಚದುರಡಿಗೆ ಎರಡು ಸಾವಿರ! ಕಡಿಮೆ ಆಯ್ತೇ? ಈಗ ಭೂಮಿ ಅಂದ್ರೆ ಬಂಗಾರ ಕಣಯ್ಯ, ಬಂಗಾರ! ಮೇಷ್ಟ್ರೆ! ಹಳೆಯ ಕಾಲದ ಮೋಹ ಬಿಟ್ಟುಬಿಡಿ. ಜಾಗ ಮುಖ್ಯವೋ, ಮಗನ ಭವಿಷ್ಯ ಮುಖ್ಯವೋ, ಯೋಚ್ನೆ ಮಾಡಿ. ನಮ್ಮ ಕಾಲ ಮುಗೀತು ಮೇಷ್ಟ್ರೆ! ಇನ್ನು ಏನಿದ್ರೂ ಮಕ್ಕಳ ಕಾಲ. ನಿಮಗೆ ಏನು ಸಹಾಯ ಬೇಕಿದ್ರೂ ಹೇಳಿ, ನಾನು ಮಾಡಿಕೊಡ್ತೀನಿ' ಅಂದ್ರು ರಾವ್. ಮುಂದಿನ ಅರ್ಧ ಗಂಟೆಯ ಕಾಲ ರಾಯರ ಬೈರಿಗೆ ಕೆಲಸ ಮಾಡುತ್ತಲೇ ಇತ್ತು. ಅವರ ಮಾತಿನ ತುಂಡರಿಸುವ ಯತ್ನದಲ್ಲಿದ್ದ ಶ್ರೀಕಂಠಯ್ಯ 'ಟಿಫನ್ ರೆಡಿ ಇದೆ. ಮುಗಿಸಿಕೊಂಡೇ ಹೋಗಿ ರಾಯರೇ!' ಅಂದ್ರು.

★★★

ಬೆಳಗು ಮೂಡುತ್ತಿದ್ದಂತೆ ಶ್ರೀನಿವಾಸ್ ರಾವ್ ಮನೆಗೆ ಬರುತ್ತಿದ್ದುದನ್ನು ನೋಡಿ ಸತೀಶನಿಗೆ ಅಚ್ಚರಿ. 'ಬನ್ನಿ, ಅಂಕಲ್!' ಎನ್ನುತ್ತ ಅವರನ್ನು ಬರಮಾಡಿಕೊಂಡ. 'ಎಲ್ಲಿ ನಿನ್ನಪ್ಪ? ನಿನ್ನೆ ರಾತ್ರಿ ಫೋನ್ ಮಾಡಿದ್ರು...' ಎನ್ನುತ್ತಿರುವಾಗಲೇ ಶ್ರೀಕಂಠಯ್ಯ ಅಂಗವಸ್ತ್ರದಿಂದ ಕೈ ಒರೆಸಿಕೊಳ್ಳುತ್ತ ಹೊರಗೆ ಬಂದರು. ಕಾಫಿಯಾದ ನಂತರ 'ರಾಯರೇ! ನಿಮಗೆ ಬಿಲ್ಡರ್‌ಗಳ ಪರಿಚಯ ಇದೆ ಅಂತಿದ್ರಲ್ಲ. ನನಗೆ ಒಬ್ಬ ಉತ್ತಮ ಬಿಲ್ಡರ್ ಕಡೆಗೆ ಕರ್ಕೊಂಡು ಹೋಗಿ' ಅಂದರು. 'ಬುದ್ಧಿವಂತಿಕೆ ಅಂದ್ರೆ ಇದು. ಮೆಚ್ಚಿದೆ, ಮೇಷ್ಟ್ರೇ! ಇದು ಸರಿಯಾದ ನಿರ್ಧಾರ' ಎನ್ನುತ್ತ ಸತೀಶನೆಡೆಗೆ ನೋಡಿದರು. ಸತೀಶ ಆಶ್ಚರ್ಯ, ಸಂತೋಷಗಳ ವಿಚಿತ್ರ ಮಿಶ್ರಭಾವದಲ್ಲಿ ಸಿಲುಕಿ ಮೂಕನಾಗಿ ಕೂತ. 'ಮೇಷ್ಟ್ರೇ! ಇಷ್ಟು ಹೇಳಿದ್ರಲ್ಲ; ಸಾಕು. ನೀವೆಲ್ಲೂ ಹೋಗಬೇಕಿಲ್ಲ. ಇನ್ನೆರಡು ಗಂಟೇಲಿ ಸ್ವತಃ ಬಿಲ್ಡರ್ ನಿಮ್ಮ ಮನೆಯ ಬಾಗಿಲಿಗೆ ಬರೋ ಹಾಗೆ ಮಾಡ್ತೀನಿ, ನೋಡ್ತಿರಿ' ಎನ್ನುತ್ತ ಎದ್ದು ನಡೆದರು.

ಮುಂದಿನ ಒಂದು ತಿಂಗಳ ಅವಧಿಯಲ್ಲಿ ಮೂರು ಕೋಟಿ ಇಪ್ಪತ್ತೈದು ಲಕ್ಷಕ್ಕೆ ಡೀಲ್ ಸೆಟ್ಲ್ ಆಗಿ ಶ್ರೀಕಂಠಯ್ಯನವರ ಮನೆ ಮತ್ತು ಸುತ್ತಣ ಇಪ್ಪತ್ತು ಸೆಂಟ್ಸ್ ನಿವೇಶನ ಮಾರಾಟವಾಗಿ ಹೋಯಿತು.